SC No. 139/2019

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

S.C. No. 139/2019

ಸಾಕ್ಷಿಯ ಹೆಸರು	ಶ್ರೀ. ಜಯರಾಮೇ ಗೌಡ	ಚಾಸಾಃ	ಪ್ರಾಸಾಃ
ತಂದೆಯ ಹೆಸರು	ತಿಮ್ಮಣ್ಣ	13	10
ವಯಸ್ಸು	42 ವರ್ಷ	ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **16.04.2026.**	
ಉದ್ಯೋಗ	ದೇವಿಹಳ್ಳಿ - ಹಾಸನ ಟೋಲ್ incharge		
ವಾಸ ಸ್ಥಳ	ಹಿರಿಸಾವೆ		

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು 2012 ರಿಂದ 2021 ರವರೆಗೆ ದೇವಿಹಳ್ಳಿ ಹಾಸನ ಟೋಲ್ ವೇಸ್ ಲಿಮಿಟೆಡ್ ನಲ್ಲಿ shift in-charge ಆಗಿ ಕೆಲಸ ಮಾಡುತ್ತಿದ್ದೆ. ದಿನಾಂಕ 20.08.2018 ರಂದು ವರ್ತೂರು ಪೊಲೀಸರು ನಮ್ಮ ಟೋಲ್ ಗೆ ಮನವಿಯನ್ನು ನೀಡಿ KA-03/AE-2652 ವಾಹನ ನಮ್ಮ ಟೋಲ್ ನಲ್ಲಿ ಹೋಗಿದಿಯೇ ಎಂದು ಮಾಹಿತಿ ನೀಡಿದ್ದು ಅದರಂತೆ ನಾನು ನಮ್ಮ system ನಲ್ಲಿ ಪರಿಶೀಲನೆ ಮಾಡಿದಾಗ ಅದೇ ದಿನ ಬೆಳಗ್ಗೆ 7.00 ಗಂಟೆಗೆ ನಮ್ಮ ಟೋಲ್ ನಿಂದ ಹೋಗಿರುವುದು ಕಂಡು ಬಂದ ಬಗ್ಗೆ ಮಾಹಿತಿ ನೀಡಿದ್ದೇನೆ. ಹಣ ಕಟ್ಟಿದ ರಶೀದಿಯನ್ನು ಸಹ ಪೊಲೀಸರಿಗೆ ನೀಡಿದ್ದೇನೆ. ಈ ಬಗ್ಗೆ ದಾಖಲಾತಿಯನ್ನು ಮತ್ತು ರಶೀದಿಯ ನಕಲನ್ನು ಹಾಗೂ ಕಲಂ. 65 ರೀತಿ ದೃಡೀಕರಣ ಪತ್ರವನ್ನು ನೀಡಿದ್ದು ಅವುಗಳನ್ನು ನಿಶಾನೆ.ಪಿ. 47 ರಿಂದ 49 ಎಂದು ಸಾಕ್ಷಿಯ ಸಹಿಗಳನ್ನು ನಿಶಾನೆ.ಪಿ. 47 (ಎ) ರಿಂದ 49 (ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **MR** ವಕೀಲರಿಂದ :

1. ನಾನು computer generated ಮಾಹಿತಿಯನ್ನು ನೀಡಿದ್ದೇನೆ. ಕಲಂ. 65 (ಬಿ) ನಮೂನೆಯನ್ನು ಪೊಲೀಸರೇ ತಂದು ಕೊಟ್ಟಿದ್ದರು. ನಾನು ಆ ದಿನ ಎಷ್ಟು ಗಂಟೆಗೆ ಲಾಗಿನ್ ಆಗಿದ್ದೇನೆ ಹಾಗೂ ಎಷ್ಟು ಗಂಟೆಗೆ ಲಾಗೌಟ್ ಆಗಿದ್ದೇನ ಎಂದು ಪೊಲೀಸರಿಗೆ ಮಾಹಿತಿ ನೀಡಿಲ್ಲ. ನಮ್ಮ ಟೋಲ್

ನಲ್ಲಿ ಒಟ್ಟು 10 ಲೇನ್ ಗಳು ಇವೆ. 3 ನೇ ಲೇನ್ ನಲ್ಲಿ ಆ ಕಾರು ಹೋಗಿದ್ದು ನಾನು certificate ನಲ್ಲಿ ಆ ಬಗ್ಗೆ ಬರೆದಿಲ್ಲ. ಅವರು ಹಣವನ್ನು ಕಟ್ಟಿದ್ದು ಆ ಬಗ್ಗೆ certificate ನಲ್ಲಿ ನಮೂದು ಮಾಡಿಲ್ಲ. ನಾನು ಟೋಲ್ ನಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆಯನ್ನು ಕೊಟ್ಟಿಲ್ಲ. ನಾನು MBA ಓದಿರುತ್ತೇನೆ. certificate ಪೊಲೀಸರು ಕೊಟ್ಟಿದ್ದರಿಂದ ಅದರಲ್ಲಿ ಹೆಸರನ್ನು ಬಿಟ್ಟರೇ ಬೇರೆ ಏನು ನಮೂದು ಮಾಡಿಲ್ಲ. ಪೊಲೀಸರು ನನ್ನನ್ನು ವಿಡಿಯೋ ಮತ್ತು ಫೋಟೊ ತೆಗೆದುಕೊಡಲು ಕೇಳಿಲ್ಲ. Certificate ನಲ್ಲಿ ಕಾರು ಹೋಗಿರುವ ಸಮಯ, ದಿನಾಂಕ ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಕಾರು ಯಾವ ಕಂಪನಿಯದ್ದು, ಬಣ್ಣ ಯಾವುದೇ ಮಾಹಿತಿಯನ್ನು certificate ನಲ್ಲಿ ಬರೆದಿಲ್ಲ. ನಾವು ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಮತ್ತು ನಮ್ಮ ಟೋಲ್ ನಲ್ಲಿ ಆ ಕಾರು ಹೋಗಿಲ್ಲ ಎಂದರೆ ಸರಿ ಅಲ್ಲ. ಪೊಲೀಸರ ಮಾತನ್ನು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರು ವಿಚಾರಣೆ ಇಲ್ಲ

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

(ಶ್ರೀಮತಿ. ಬಿ.ಎಸ್.ರೇಖಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.